ದಿನಾಂಕಃ 22-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ವಾದಿ ನನ್ನ ಸಂಬಂಧಿಕ ಮತ್ತು ನನ್ನ ಅಕ್ಕನ ಮಗ. ದಾವಾಸ್ತಿಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದಾವಾಸ್ತಿ ಸರ್ವೆ ನಂ 10/5 ರಲ್ಲಿ 2 ಎಕರೆ 10 ಗುಂಟೆ ಇದೆ. ಸದರಿ ದಾಖಲೆ ಪ್ರತಿವಾದಿಯ ಹೆಸರಿನಲ್ಲಿ ದರ್ಖಾಸ್ತು ಮೂಲಕ ಬಂದತಹ ದಾಖಲೆಯನ್ನು ನೋಡಿರುತ್ತೇನೆ. ಅದರಂತೆ ದಾವಾಸ್ತಿಯ ಖಾತೆ ಮತ್ತು ಪಹಣಿ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಮಂಜೂರಾತಿ ಕಾಲಕ್ಕೆ ದಾವಾಸ್ತಿಯನ್ನು ಪರಭಾರೆ ಮಾಡಬಾರದು ಎಂದು ಷರತ್ತನ್ನು ವಿಧಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 13 ವರ್ಷದವರೆಗೂ ಪರಭಾರೆ ಮಾಡಬಾರದು ಎಂಬ ಷರತ್ತನ್ನು ವಿಧಿಸಿರುತ್ತಾರೆ ಎಂದು ನುಡಿಯುತ್ತಾರೆ. ದಿಃ12-12-1991 ರಲ್ಲಿ ದಾಖಲೆ ನೊಂದಣಿಯಾಗಿದೆ ಎಂದರೆ ಸರಿ. ಸದರಿ ನೊಂದಣಿ ಯಾವ ಕಾರಣಕ್ಕಾಗಿ ಆಗಿದೆ ಎಂದು ನನಗೆ ಗೊತ್ತು.

ಈ ದಾವೆಯ ಪ್ರತಿವಾದಿ ಹಣದ ಅವಶ್ಯಕತೆ ಇದ್ದ ಕಾರಣ 10 ಸಾವಿರ ರೂ.ಗಳಿಗೆ ಮರು ಪಾವತಿ ಖಾತ್ರಿಗೋಸ್ಕರ ದಾವಾಸ್ತಿಯನ್ನು ಆಧಾರಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಹೊರತುಪಡಿಸಿ ನನ್ನ ಸಮಕ್ಷಮ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ಸದರಿ ನಿಡಿ-1 ರ ನಂತರ ವಾದಿ ಮತ್ತು ಪ್ರತಿವಾದಿಗಳ ನಡುವೆಯಾದ ದಾವಾಸ್ತಿಯ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ ನನಗೆ ಸಂಬಂಧಿಕನಾದ ಕಾರಣ ನಾನು ಆತನಿಗೆ ಅನುಕೂಲಮಾಡಿಕೊಡಲು ಸಾಕ್ಷ್ಯ ನುಡಿಯಲು ಬಂದಿದ್ದೆನೆ ಎಂದರೆ ಸರಿಯಲ್ಲ.

ದಿಃ12-12-1991 ರಂದು ಆದಂತಹ ನಿಡಿ-1 ನ್ನು ಹೊರತಪಡಿಸಿ ಬೇರೆಯಾವುದೇ ದಾಖಲೆ ನಡೆದಿರುವುದಿಲ್ಲ. ಪ್ರತಿವಾದಿ ಈ ದಾವೆ ಹೂಡುವ ಪೂರ್ವ ವಾದಿಗೆ ನೋಟಿಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯ ಮೇಲೆ ಐಟೆನ್ಷ ನ್ ಲೈನ್ ಹಾದು ಹೋಗುವ ಕಾರಣದಿಂದ ಸದರಿ ಪರಿಹಾರದ ಹಣದ ನಿಮಿತ್ತ ವ್ಯಾಜ್ಯ ಕಾರಣ ಉಂಟಾಗಿದೆ ಎಂದರೆ ಸರಿ. ಸದರಿ ಪರಿಹಾರದ ಹಣವನ್ನು ಪ್ರತಿವಾದಿ ಸಂಬಂಧಪಟ್ಟ ಇಲಾಖೆಯಿಂದ ಪಡೆಯಲು ಹೋದಾಗ ಅದಕ್ಕೆ ತಕರಾರು ತೆಗೆದಿರುತ್ತಾರೆ ಎಂದರೆ ಸರಿ. ಸದರಿ ತಕರಾರಿನ ನಂತರ ವಾದಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಈ ದಿನದವರೆಗೂ ವಾದಿಯ ಹೆಸರಿನಲ್ಲಿ ದಾವಾಸ್ತಿಯ ಖಾತೆ ಮತ್ತು ಪಹಣಿ ಇಲ್ಲ ಎಂದರೆ ಸರಿ. ನಾನು ಮತ್ತು ವಾದಿ ಸೇರಿ ನಿಪಿ-1 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ.

ಸದರಿ ನಿಪಿ-1 ನ್ನು ಯಾರು ಎಲ್ಲಿ ಬೆರಳಚ್ಚು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು 30 ವರ್ಷಗಳಾದ ಕಾರಣ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ನ್ನು ನೊಂದಣಿ ಮಾಡುವ ದಿನಾಂಕದಂದೇ ನಿಪಿ-1 ರ ಪ್ರಮಾಣಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿ. ನಿಪಿ-1 ರ ದಿನಾಂಕದಂದು ಖರೀದಿಸಿದ ಖಾಲಿ ಸ್ಟಾಂಪ್ ಪೇಪರ್ ಗೆ

ಪ್ರತಿವಾದಿಯ ಸಹಿಯನ್ನು ಪಡೆದಿದ್ದು, ಈ ದಾವೆ ಹೂಡುವ ಕಾಲಕ್ಕೆ ಸದರಿ ಖಾಲಿ ಕಾಗದದ ಮೇಲೆ ಬೆರಳಚ್ಚು ಮಾಡಿಸಿರುತ್ತೆವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದ ವಿಚಾರ ನನಗೆ ನೆನಪಿಲ್ಲ.

ನಿಡಿ-1 ರ ಮಾಹಿತಿ ನಿಪಿ-1 ರಲ್ಲಿ ಉಲ್ಲೇಖವಿರುವ ಬಗ್ಗೆ ನನಗೆ ನೆನಪಿಲ್ಲ. ನಿಪಿ-1 ರ ಮಾಹಿತಿ ನಿಡಿ-1 ರಲ್ಲಿ ಉಲ್ಲೇಖವಿರುವ ಬಗ್ಗೆ ನನಗೆ ನೆನಪಿಲ್ಲ. ವಾದಿ ಪ್ರತಿವಾದಿಗೆ ಸದರಿ ಪರಿಹಾರ ಹಣಕ್ಕೆ ತಕರಾರು ಸಲ್ಲಿಸುವ ಪೂರ್ವ ನಿಪಿ-1 ರ ಆಧಾರದ ಮೇಲೆ ಕ್ರಯಪತ್ರವನ್ನು ಬರೆದುಕೊಡುವಂತೆ ಯಾವತ್ತಿಗೂ ಬೇಡಿಕೆ ಇಟ್ಟಿಲ್ಲ ಎಂದರೆ ಸರಿ. ವಾದಿ ಪ್ರತಿವಾದಿಗೆ ನೋಟಿಸನ್ನು ಸಹ ಕಳುಹಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಎಂದು ವಾದಿಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣಪತ್ರದಲ್ಲಿ ಪ್ರತಿವಾದಿ ನನಗೆಪರಿಚಿತರು ಎಂದು ಉಲ್ಲೇಖಿಸಿದ್ದೇನೆ ಎಂದರೆ ಸರಿ. ಹಾಗಾಗಿ ಪ್ರತಿವಾದಿ ಇರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ. ಹಾಗಾಗಿ ನಾನು ನನ್ನ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದಂತೆ ನಿಪಿ-1 ರ ವ್ಯವಹಾರ ನಡೆದಿಲ್ಲ ಎಂದರೆ ನನಗೆ ನೆನಪಿಲ್ಲ.

ಪ್ರಸ್ತುತ ಭೂಮಿಯ ಬೆಲೆ ಬಹಳ ಆಗಿದೆ ಎಂದರೆ ಸರಿ. ಅಡಿಕೆ ತೋಟದ ಬೆಲೆ 1 ಎಕರೆಗೆ 50 ಲಕ್ಷ ರೂ.ಆಗಿದೆ ಎಂದರೆ ಸರಿ ಆದರೆ ಮಾವಿನತೋಟ ಆಗಿಲ್ಲ. ನಿಪಿ-2 ರಲ್ಲಿ ಉಲ್ಲೇಖವಿರುವಂತೆ ಬೆಳೆಯ ವಿವರದ ಕಾಲಂನಲ್ಲಿ ಮೆಕ್ಕೆಜೋಳ ಎಂದು ನಮೂದು ಇದೆ ಎಂದರೆ ಸರಿ. ಸದರಿ ಸರ್ವೆ ನಂ 10/5 ರಲ್ಲಿ ಮಾವಿನತೋಟ ಇದೆ ಎಂದರೆ ಸರಿ. ಸದರಿ ಮಾವಿನತೋಟವೂ ಸಹ ಪ್ರತಿ ಎಕರೆಗೆ 20-25 ಲಕ್ಷ ರೂ. ಆಗಿದೆ ಎಂದರೆ ಸರಿಯಲ್ಲ. ಲಿಂಗದಹಳ್ಳಿ ಪೂರ್ತಿ ಅಡಿಕೆ ತೋಟದ ಪ್ರದೇಶವಾಗಿದೆ ಎಂದರೆ ಸರಿ. ದಾವಾಸ್ತಿಗೆ ಹೊಂದಿಕೊಂಡತೆ ಉತ್ತರ-ದಕ್ಷಿಣಕ್ಕೆ ಪಾಂಡುರಂಗ ಶೇಟಿ ಮತ್ತು ಚಂದ್ರಚಾರಿರವರ ಅಡಿಕೆ ತೋಟವಿದೆ ಒಂದರೆ ಸಾಕ್ಷಿ ಒಂದೂವರೆ ವರ್ಷದ ಅಡಿಕೆ ತೋಟ ಇದೆ ಎಂದರೆ ಸರಿ. ಸದರಿ ಮಾವಿನ ಗಿಡದ ತೋಟದಲ್ಲಿ ಮಧ್ಯೆದಲ್ಲಿ ಅಡಿಕೆ ಗಿಡಗಳನ್ನು ಹಾಕಿದ್ದಾರೆ ಎಂದು ನುಡಿಯುತ್ತಾರೆ. ದಾವಾಸ್ತಿ ಪಶ್ಚಿಮಕ್ಕೆ ಶಾಂತಿ ಸಾಗರದ ಮುಖ್ಯ ರಸ್ತೆ ಇದೆ ಎಂದರೆ ಸರಿ. ದಾವಾಸ್ತಿಯ ಪೂರ್ವಕ್ಕೆ ಅನಧಿಕೃತವಾಗಿ ಸಾಗು ಮಾಡುತ್ತಿರುವ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖಾಲಿ ಜಾಗವಿದೆ ಎಂದು ನುಡಿಯುತ್ತಾರೆ.

ಸರ್ವೆ ನಂ 10 ಮೂಲತಃ ಸರ್ಕಾರದ ಗೋಮಾಳದ ಜಮೀನು ಎಂದರೆ ಸರಿ. ಸರ್ವೆ ನಂ 10 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರಿನಲ್ಲಿ ನೂರಾರು ಜನ ಸಾಗು ಮಾಡುತ್ತಾರೆ ಎಂದರೆ ಸರಿ. ದಾವಾಸ್ತಿಯನ್ನು ಯಾರು ಸಾಗು ಮಾಡುತ್ತಿದ್ದಾರೆ ಎಂಬ ವಿಚಾರ ದಾವಾಸ್ತಿಯ ಅಜುಬಾಜುದಾರರಿಗೂ ಸಹ ಗೊತ್ತಿದೆ. ಹಾಗಾಗಿ ನಾನು ವಾದಿಗೆ ಅನುಕೂಲ ಮಾಡಿಕೊಡಲು ಈ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.